ಭಾರತೀಯ ಭಾಷಾ ಸಂಸ್ಥಾನ

ಶಿಕ್ಷಣ ಸಚಿವಾಲಯ

ಉನ್ನತ ಶಿಕ್ಷಣ ಇಲಾಖೆ, ಭಾರತ ಸರಕಾರ

ಮಾನಸಗಂಗೋತ್ರಿ, ಹುಣಸೂರು ರಸ್ತೆ, ಮೈಸೂರು- 570006

ಎಫ್.ಸಂಖ್ಯೆ. ಸಿಇಎಸ್ ಸಿಕೆ/ನೇಮಕಾತಿ/2022 ದಿನಾಂಕ 08.03.2022

**Revised 26th March 2022**

**ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಅವಶ್ಯವಾಗಿ ಬೇಕಾಗಿರುವ ಯೋಜನ ಸಿಬ್ಬಂದಿ**

ಭಾರತ ಸರಕಾರ ಸ್ಥಾಪಿಸಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಅವಶ್ಯವಿರುವ ಈ ಕೆಳಕಂಡ ಸ್ಥಾನಗಳಿಗೆ **"ಗುತ್ತಿಗೆ ಆಧಾರದಲ್ಲಿ"** ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ** ಕೇಂದ್ರವು, ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ ಗುರುತಿಸುವ ವಿವಿಧ ಯೋಜನೆ ಹಾಗೂ ಚಟುವಟಿಕೆಗಳ ಜೊತೆಗೆ, ಸಂಶೋಧನೆ, ದಾಖಲೀಕರಣ, ಪ್ರಸರಣ ಮತ್ತು ಬೋಧನೆಯ ಕೆಲಸವನ್ನು ಒಳಗೊಂಡಂತೆ ಕಾರ್ಯ ನಿರ್ವಹಿಸುತ್ತಿದೆ. ಇವುಗಳ ಜೊತೆಗೆ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಮತ್ತು ವಿದೇಶಗಳಲ್ಲಿ ಇತರ ಶಾಸ್ತ್ರೀಯ ಭಾಷೆಗಳ ಕುರಿತು ಜಾಗತಿಕವಾಗಿ ವೈಯಕ್ತಿಕ ಹಾಗೂ ಸಾಂಸ್ಥಿಕ ನೆಲೆಗಳಲ್ಲಿ ಕೈಗೊಳ್ಳುತ್ತಿರುವ ಕಾರ್ಯಯೋಜನೆಗಳಿಗೆ ಸಹಯೋಗ ನೀಡುವ ಕಾರ್ಯವನ್ನೂ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವು ನಿರ್ವಹಿಸುತ್ತಿದೆ.

| ಕ್ರ. ಸಂ. | ಸ್ಥಾನ/ಹುದ್ದೆಯ ಹೆಸರು | ಒಟ್ಟು ಸ್ಥಾನಗಳು | ತಿಂಗಳ ಸಂಚಿತ ವೇತನ/ಸಂಭಾವನೆ |
|---|---|---|---|
| | **ಶೈಕ್ಷಣಿಕ ಸ್ಥಾನಗಳು** | | |
| 1 | ಹಿರಿಯ ಸಂಶೋಧಕರು (ಸೀನಿಯರ್ ಫೆಲೋ) | 05 | ರೂ. 41,000/- |
| 2 | ಸಹಾಯಕ ಸಂಶೋಧಕರು (ಅಸೋಸಿಯೇಟ್ ಫೆಲೋ) | 10 | ರೂ. 37,000/- |
| | **ಆಡಳಿತಾತ್ಮಕ ಹುದ್ದೆಗಳು** | | |
| 3 | ಪ್ರಥಮ ದರ್ಜೆ ಗುಮಾಸ್ತ (ಅಪ್ಪರ್ ಡಿವಿಜನ್ ಕ್ಲರ್ಕ್) | 01 | ರೂ. 27,200/- |
| 4 | ದ್ವಿತೀಯ ದರ್ಜೆ ಗುಮಾಸ್ತ (ಲೋವರ್ ಡಿವಿಜನ್ ಕ್ಲರ್ಕ್) | 02 | ರೂ. 21,200/- |

**ಹಿರಿಯ/ ಸಹಾಯಕ ಸಂಶೋಧಕರ ಶೈಕ್ಷಣಿಕ ಸ್ಥಾನಗಳಿಗೆ ಷರತ್ತುಗಳು:-**

1. ಸಂಶೋಧನ ಕಾರ್ಯದ ಕಾಲಾವಧಿ 12 ತಿಂಗಳುಗಳು (10+2). ಸಂಸ್ಥೆಯ ಸ್ವಂತ ವಿವೇಚನೆ ಮೇರೆಗೆ ಈ ಅವಧಿಯನ್ನು ಮುಂದುವರಿಸಬಹುದು.

2. ಶೈಕ್ಷಣಿಕ ಶಿಸ್ತು/ಸಂಶೋಧನೆಯ ಕ್ಷೇತ್ರ: ಭಾಷಾವಿಜ್ಞಾನ, ಸಾಹಿತ್ಯ, ಶಾಸನ ಶಾಸ್ತ್ರ, ವ್ಯಾಕರಣ, ಅನುವಾದ, ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಪುರಾತತ್ವ ಶಾಸ್ತ್ರ, ಹಸ್ತಪ್ರತಿಶಾಸ್ತ್ರ, ನಾಣ್ಯ ಶಾಸ್ತ್ರ, ಶಿಕ್ಷಣ, ಜಾನಪದ, ಸಂಗೀತ, ನೃತ್ಯ, ನಾಟಕ, ರಂಗಭೂಮಿ ಇವುಗಳಿಗೆ ಸಂಬಂಧಿಸಿದ ಇತರ ಶಿಸ್ತುಗಳಲ್ಲಿ ಡಾಕ್ಟರೇಟ್ ಪದವಿ ಇತ್ಯಾದಿ

3. ಪ್ರತಿ ಸಂಶೋಧನ ವಿಷಯ ಕುರಿತ ಸಾರಲೇಖದ ಆಧಾರದಲ್ಲಿ ಅರ್ಜಿಗಳನ್ನು ಆಯ್ಕೆ ಮಾಡಿ, ಕಿರು ಪಟ್ಟಿಯನ್ನು ಸಿದ್ಧಪಡಿಸಲಾಗುವುದು.

4. ಕಿರು ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಅಭ್ಯರ್ಥಿಗಳನ್ನು ಅಂತಿಮ ಸಂದರ್ಶನಕ್ಕೆ ಕರೆಯಲಾಗುವುದು.

5. ಆಯ್ಕೆಯಾದ ಅಭ್ಯರ್ಥಿಗಳು ತಕ್ಷಣವೇ ಸಂಶೋಧನ ಕೆಲಸವನ್ನು ಕೈಗೊಳ್ಳಲು ಸಿದ್ಧರಿರಬೇಕು.

6. ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಅರ್ಜಿಯನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು ಪ್ರತಿಯೊಂದು ವಿಷಯಗಳಿಗೆ ಸಂಬಂಧಿಸಿದ ಸಾರಲೇಖವನ್ನು ಸಲ್ಲಿಸುವುದು.

7. ಅರ್ಜಿಯ ಜೊತೆಗೆ, ಸಾರಲೇಖ ಅಥವಾ ಇತರ ದಾಖಲೆಗಳನ್ನು ಲಗತ್ತಿಸದಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

8. ಆಯ್ಕೆಯಾದ ಅಭ್ಯರ್ಥಿಗಳು ಸಂಸ್ಥೆಯ ನಿಯಮ ನಿಬಂಧನೆಗಳಿಗೆ ಒಳಪಟ್ಟಂತೆ, ನಿಯಮಾನುಸಾರ ಮುಚ್ಚಳಿಕೆಯನ್ನು ಬರೆದು ಸಲ್ಲಿಸುವುದು..

**ಸಂಶೋಧಕರ ಕರ್ತವ್ಯ ಮತ್ತು ಜವಾಬ್ದಾರಿಗಳು ಹಿರಿಯ ಮತ್ತು ಸಹಾಯಕ ಸಂಶೋಧಕರು**

1. ಪ್ರತಿ ಸಂಶೋಧಕರು ತಮಗೆ ಹಂಚಿಕೆ ಮಾಡಲಾದ ಶಿಸ್ತು/ಕ್ಷೇತ್ರದ ಬಗ್ಗೆ ಸಂಶೋಧನ ಕಾರ್ಯವನ್ನು ಕೈಗೊಳ್ಳಬೇಕು.

2. ಹಿರಿಯ ಮತ್ತು ಸಹಾಯಕ ಸಂಶೋಧಕರು ಹಂಚಿಕೆ ಮಾಡಲಾದ ಶಿಸ್ತು/ಕ್ಷೇತ್ರಗಳ ಸಂಶೋಧನಾ ಕಾರ್ಯವನ್ನು ತಜ್ಞರ ಸಮಿತಿ ಮತ್ತು ಯೋಜನಾ ನಿರ್ದೇಶಕರ ಮಾರ್ಗದರ್ಶನದನ್ವಯ ನಿರ್ವಹಿಸಬೇಕಾಗುತ್ತದೆ.

3. ಹಿರಿಯ ಮತ್ತು ಸಹಾಯಕ ಸಂಶೋಧಕರ ಸಂಶೋಧನ ಪ್ರಗತಿಯನ್ನು ವಿಷಯ ತಜ್ಞರು ಮತ್ತು ಮಾರ್ಗದರ್ಶಕರು ಕೂಲಂಕಷವಾಗಿ ಪರಿಶೀಲಿಸಿ, ಮೌಲ್ಯಮಾಪನ ಮಾಡಿ, ಮಾಸಿಕವಾಗಿ ಸಂಶೋಧನ ಪ್ರಗತಿ ತೃಪ್ತಿಕರವಾಗಿದ್ದಲ್ಲಿ ಮಾಸಿಕ ಸಂಭಾವನೆಯನ್ನು ನೀಡಲಾಗುವುದು.

4. ಹಿರಿಯ ಮತ್ತು ಸಹಾಯಕ ಸಂಶೋಧಕರು ಸಂಶೋಧನೆಯನ್ನು ಸ್ವತಂತ್ರವಾಗಿ ನಡೆಸಬಹುದಾಗಿದ್ದು, ಮಾಸಿಕ/ತ್ರೈಮಾಸಿಕ ಪ್ರಗತಿಯನ್ನು ಯೋಜನಾ ನಿರ್ದೇಶಕರು/ತಜ್ಞರ ಸಮಿತಿ ಪರಿಶೀಲಿಸುವುದು.

5. ಮಾಸಿಕ ಪ್ರಗತಿ ವರದಿಯನ್ನು ಹಿರಿಯ ಮತ್ತು ಕಿರಿಯ ಸಂಶೋಧಕರು ಯೋಜನಾ ನಿರ್ದೇಶಕರಿಗೆ ಸಲ್ಲಿಸಬೇಕು.

6. ಯೋಜನಾ ನಿರ್ದೇಶಕರು ಮಾಸಿಕ ಪ್ರಗತಿ ವರದಿಯನ್ನು ಮಾನ್ಯ ಮಾಡಿದ ಬಳಿಕ ಮಾಸಿಕ ಸಂಭಾವನೆಯು ಪಾವತಿಯಾಗುವುದು.

7. ಹಿರಿಯ ಮತ್ತು ಸಹಾಯಕ ಸಂಶೋಧಕರು ಸಲ್ಲಿಸುವ ತ್ರೈಮಾಸಿಕ ಪ್ರಗತಿ ವರದಿಯನ್ನು ತಜ್ಞರ ಸಮಿತಿ ಪರಿಶೀಲಿಸುವುದು.

8. ಯೋಜನೆಗಾಗಿ ನಿಗದಿಪಡಿಸಿರುವ 10+2 ತಿಂಗಳ ಅವಧಿಯ ಒಳಗಾಗಿ ಯೋಜನೆಯನ್ನು ಸಂಪೂರ್ಣಗೊಳಿಸುವುದು ಮತ್ತು ಅಂತಿಮ ಸಂಪ್ರಬಂಧವನ್ನು 12ನೇ ತಿಂಗಳ ಕೊನೆಯೊಳಗಾಗಿ ಸಲ್ಲಿಸುವುದು.

**ನಿಯಮಗಳು ಮತ್ತು ನಿಬಂಧನೆಗಳು:-**

1. ಭಾರತ ಸರಕಾರದ ಅನುಮೋದನೆಯೊಂದಿಗೆ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಗುತ್ತಿಗೆ ಆಧಾರದಲ್ಲಿ ಅವಶ್ಯವಿರುವ ಸ್ಥಾನಗಳನ್ನು ಭರ್ತಿ ಮಾಡಲಾಗುತ್ತದೆ.

2. ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ಸಿಬ್ಬಂದಿಗಳ ನೇಮಕಾತಿ ಅಧಿಕಾರವು ನಿರ್ದೇಶಕರು, ಭಾರತೀಯ ಭಾಷಾ ಸಂಸ್ಥಾನ, ಮೈಸೂರು ಇವರದ್ದಾಗಿದ್ದು, ಯೋಜನಾ ಸಿಬ್ಬಂದಿಗಳ ಸೇವೆಯು ತೃಪ್ತಿಕರವಾಗಿರದಿದ್ದಲ್ಲಿ ಮತ್ತು ಅನುಚಿತ ವರ್ತನೆ ಅಥವಾ ಕೇಂದ್ರದ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿರುವುದು ಕಂಡುಬಂದಲ್ಲಿ, ಅವರನ್ನು ಸೇವೆಯಿಂದ ವಜಾಗೊಳಿಸುವ ಅಧಿಕಾರವೂ ನೇಮಕಾತಿ ಅಧಿಕಾರಿಯವರದೇ ಆಗಿರುತ್ತದೆ.

3. ಆಡಳಿತ ಸಿಬ್ಬಂದಿಯ ಅವಧಿಯು ಆರಂಭದಲ್ಲಿ ಒಂದು ವರ್ಷದ್ದಾಗಿದ್ದು, ಅವರ ನಿರ್ವಹಣೆಯ ಬಗ್ಗೆ ವಾರ್ಷಿಕ ವರದಿಯು ತೃಪ್ತಿಕರವಾಗಿದ್ದಲ್ಲಿ ಅವಧಿಯನ್ನು ವಿಸ್ತರಿಸಲಾಗುವುದು.

4. ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು, ಸಾರಲೇಖ ಹಾಗೂ ಅನುಬಂಧಗಳೊಂದಿಗೆ https://apply.ciil.org ಓನ್ ಲೈನ್ ಅಪ್ಲಿಕೇಷನ್ ಪೋರ್ಟಲ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

5. ಸಂಬಂಧಪಟ್ಟ ಜಾಹಿರಾತು, ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ದಿನಾಂಕದಿಂದ 21 ದಿವಸಗಳ ಒಳಗೆ ಸಲ್ಲಿಸಿರುವ ಅರ್ಜಿಗಳನ್ನು ಸ್ವೀಕರಿಸಲಾಗುವುದು., (ಕರ್ನಾಟಕದಲ್ಲಿ ಪ್ರಸರಣದಲ್ಲಿರುವ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳು)

6. ಕೊನೆಯ ದಿನಾಂಕದ ನಂತರ ಸ್ವೀಕಾರವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

7. ಅರ್ಜಿಗಳನ್ನು ಸ್ವೀಕಾರ ಮಾಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಹೊಂದಿದ್ದು, ಸಂಸ್ಥೆಯ ತೀರ್ಮಾನವೇ ಅಂತಿಮವಾದುದು.

8. ಸ್ಥಾನ/ಹುದ್ದೆಗಳ ಸಂಖ್ಯೆಗಳನ್ನು ಹೆಚ್ಚು/ಕಡಿಮೆಗೊಳಿಸುವ ಮತ್ತು ವಿಶೇಷ ಅರ್ಹತೆಗಳಿರುವ ಯೋಗ್ಯ ಅಭ್ಯರ್ಥಿಗಳಿದ್ದಲ್ಲಿ ಅರ್ಹತೆಯ ಮಾನದಂಡಗಳನ್ನು ಸಡಿಲಗೊಳಿಸುವ ಹಕ್ಕು ಸಂಸ್ಥೆಯದ್ದಾಗಿರುತ್ತದೆ.

9. ಅಪೂರ್ಣಗೊಂಡ ಹಾಗೂ ನಿಗದಿತ ದಿನಾಂಕದ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

10. ಸೇವೆಯಲ್ಲಿರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಉದ್ಯೋಗದಾತರ ಮೂಲಕ ಸಲ್ಲಿಸುವುದು ಮತ್ತು ಮುಂಗಡ ಪ್ರತಿಯನ್ನು ಕೊನೆಯ ದಿನಾಂಕದೊಳಗಾಗಿ ಕಚೇರಿಗೆ ತಲುಪುವಂತೆ ಕಳುಹಿಸುವುದು.

11. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಪ್ರಯಾಣ/ದಿನಭತ್ಯೆಯನ್ನು ಪಾವತಿಸಲಾಗುವುದಿಲ್ಲ.

12. https://apply.ciil.org ನಲ್ಲಿ ಲಭ್ಯವಿರುವ ಓನ್ ಲೈನ್ ಅಪ್ಲಿಕೇಷನ್ ಪೋರ್ಟಲಲ್ಲಿ ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು.

13. ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅಥವಾ ಮಾಡದಿರುವ ಬಗೆಗೆ ಸಂಸ್ಥೆಯು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾದುದು.

**ಕೆಲಸ ಮಾಡುವ ಸ್ಥಳ: ಮೈಸೂರು- ಕರ್ನಾಟಕ ರಾಜ್ಯ**

**ಮೇಲಿನ ಎಲ್ಲ ಸ್ಥಾನಗಳಿಗಾಗಿ ನಡೆಸುವ ಸಂದರ್ಶನದ ಜಾಗ ಮತ್ತು ಸ್ಥಳವನ್ನು ಅರ್ಹ ಹಾಗೂ ಕಿರು ಪಟ್ಟಿ (ಶಾರ್ಟ್ ಲಿಸ್ಟ್) ಯಲ್ಲಿರುವ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.**

## ಮೇಲೆ ಸೂಚಿಸಿರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಎಲ್ಲ ಸ್ಥಾನ/ಹುದ್ದೆಗಳಿಗಾಗಿ ವಿಸ್ತೃತ ಸೂಚನಾಪತ್ರ

| ಕ್ರ.ಸಂ. | ಸ್ಥಾನದ ಹೆಸರು | ಸ್ಥಾನಗಳ ಸಂಖ್ಯೆ | ಮಾಸಿಕ ಸಂಚಿತ ವೇತನ/ಸಂಭಾವನೆ | ನಿಗದಿತ ವಯೋಮಿತಿ ವರುಷಗಳಲ್ಲಿ | ಶೈಕ್ಷಣಿಕ ಹಾಗೂ ಆವಶ್ಯಕ ಅರ್ಹತೆ | ಇತರ |
|---|---|---|---|---|---|---|
| | | | **ಶೈಕ್ಷಣಿಕ ಸ್ಥಾನಗಳು** | | | |
| 1 | ಹಿರಿಯ ಸಂಶೋಧಕರು (ಸೀನಿಯರ್ ಫೆಲೋ) | 05 | ರೂ. 41,000 | 60 ವರ್ಷ ಮೀರಿರಬಾರದು | **ಶೈಕ್ಷಣಿಕ ಅರ್ಹತೆಗಳು:** ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಕನ್ನಡ / ಭಾಷಾವಿಜ್ಞಾನ, ಸಾಹಿತ್ಯ, ಶಾಸನ ಶಾಸ್ತ್ರ, ವ್ಯಾಕರಣ, ಅನುವಾದ, ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಪುರಾತತ್ವ ಶಾಸ್ತ್ರ, ಹಸ್ತಪ್ರತಿಶಾಸ್ತ್ರ ನಾಣ್ಯ ಶಾಸ್ತ್ರ, ಶಿಕ್ಷಣ, ಜಾನಪದ, ಸಂಗೀತ, ನೃತ್ಯ, ನಾಟಕ, ರಂಗಭೂಮಿ ಇವುಗಳಿಗೆ ಸಂಬಂಧಿಸಿದ ಇತರ ಶಿಸ್ತುಗಳಲ್ಲಿ ಡಾಕ್ಟರೇಟ್ ಪದವಿ ಇತ್ಯಾದಿ ಕನ್ನಡದಲ್ಲಿ ಕೆಲಸ ಮಾಡುವ ಒಳ್ಳೆಯ ತಿಳುವಳಿಕೆಯನ್ನು ಹೊಂದಿರಬೇಕು.<br><br>ಇದೇ ವಿಷಯಗಳಲ್ಲಿ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಕನಿಷ್ಠ 55% ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ. ಕನಿಷ್ಠ ಪಕ್ಷ ಪದವಿ ಮಟ್ಟದಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಓದಿರಬೇಕು | ಅನುಭವ<br>1). ಅಂಗೀಕೃತ ವಿಶ್ವವಿದ್ಯಾನಿಲಯ ಅಥವಾ ಕಾಲೇಜು ಅಥವಾ ಸಂಸ್ಥೆಯಲ್ಲಿ ಕನಿಷ್ಠ 5 ವರ್ಷಗಳ ಬೋಧನೆ ಹಾಗೂ ಸಂಶೋಧನಾನುಭವ.<br>2). ವಿಶೇಷವಾಗಿ ಶಾಸ್ತ್ರೀಯ ಕನ್ನಡಕ್ಕೆ ಅಥವಾ ಕನ್ನಡಕ್ಕೆ ಸಂಬಂಧಿಸಿದಂತೆ, ಕನ್ನಡದಲ್ಲಿ ಕಡೆಯ ಪಕ್ಷ 5 ಗಣನೀಯ ಪ್ರಕಟಣೆಗಳು ಮತ್ತು 2 ಪ್ರಬಂಧಗಳು ಪ್ರಕಟಗೊಂಡಿರಬೇಕು.<br><br>3). ಕಂಪ್ಯೂಟರಲ್ಲಿ ಕೆಲಸ ಮಾಡುವ ಬಗೆಗೆ ತಿಳುವಳಿಕೆ ಇರಬೇಕು.<br><br>4). ಕ್ಷೇತ್ರಕಾರ್ಯ ಕೈಗೊಂಡಿರುವ ಅನುಭವವಿರಬೇಕು. |

| | | | | | | |
|---|---|---|---|---|---|---|
| 2 | ಸಹಾಯಕ ಸಂಶೋಧಕರು (ಅಸೋಸಿಯೇಟ್ ಫೆಲೋ) | 10 | 37,000 | 55 ವರ್ಷ ಮೀರಿರಬಾರದು | ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಕನ್ನಡ / ಭಾಷಾವಿಜ್ಞಾನ, ಸಾಹಿತ್ಯ, ಶಾಸನ ಶಾಸ್ತ್ರ, ವ್ಯಾಕರಣ, ಅನುವಾದ, ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಪುರಾತತ್ವ ಶಾಸ್ತ್ರ, ಹಸ್ತಪ್ರತಿಶಾಸ್ತ್ರ ನಾಣ್ಯ ಶಾಸ್ತ್ರ, ಶಿಕ್ಷಣ, ಜಾನಪದ, ಸಂಗೀತ, ನೃತ್ಯ, ನಾಟಕ, ರಂಗಭೂಮಿ ಇವುಗಳಿಗೆ ಸಂಬಂಧಿಸಿದ ಇತರ ಶಿಸ್ತುಗಳಲ್ಲಿ ಡಾಕ್ಟರೇಟ್ ಪದವಿ ಇತ್ಯಾದಿ ಕನ್ನಡದಲ್ಲಿ ಕೆಲಸ ಮಾಡುವ ಒಳ್ಳೆಯ ತಿಳುವಳಿಕೆಯನ್ನು ಹೊಂದಿರಬೇಕು.<br><br>ಇದೇ ವಿಷಯಗಳಲ್ಲಿ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಕನಿಷ್ಠ 55% ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ.<br>ಕನಿಷ್ಠ ಪಕ್ಷ ಪದವಿ ಮಟ್ಟದಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಓದಿರಬೇಕು | 1). ಅಂಗೀಕೃತ ವಿಶ್ವವಿದ್ಯಾನಿಲಯ ಅಥವಾ ಕಾಲೇಜು ಅಥವಾ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷಗಳ ಬೋಧನೆ ಹಾಗೂ ಸಂಶೋಧನಾನುಭವ.<br>2). ವಿಶೇಷವಾಗಿ ಶಾಸ್ತ್ರೀಯ ಕನ್ನಡಕ್ಕೆ ಅಥವಾ ಕನ್ನಡಕ್ಕೆ ಸಂಬಂಧಿಸಿದಂತೆ, ಕನ್ನಡದಲ್ಲಿ ಕಡೆಯ ಪಕ್ಷ 3 ಗಣನೀಯ ಪ್ರಕಟಣೆಗಳು ಮತ್ತು 1 ಪ್ರಬಂಧಗಳು ಪ್ರಕಟಗೊಂಡಿರಬೇಕು.<br><br>3). ಕಂಪ್ಯೂಟರಲ್ಲಿ ಕೆಲಸ ಮಾಡುವ ಬಗೆಗೆ ತಿಳುವಳಿಕೆ ಇರಬೇಕು.<br><br>4). ಕ್ಷೇತ್ರಕಾರ್ಯ ಕೈಗೊಂಡಿರುವ ಅನುಭವವಿರಬೇಕು. |
| **ಆಡಳಿತಾತ್ಮಕ ಹುದ್ದೆಗಳು** | | | | | | |
| 3 | ಪ್ರಥಮ ದರ್ಜೆ ಗುಮಾಸ್ತ (ಅಪ್ಪರ್ ಡಿವಿಜನ್ ಕ್ಲರ್ಕ್) | 01 | ರೂ. 27,200 | 45 ವರ್ಷಗಳು ಮೀರಿರಬಾರದು. | 1). ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿ.<br>2). ಅಕೌಂಟ್ಸ್/ಸಿಬ್ಬಂದಿ ವಿಭಾಗಗಳಲ್ಲಿ ಕ್ಲರ್ಕ್ ಅಥವಾ ಸಹಾಯಕರಾಗಿ ಕಾರ್ಯ ನಿರ್ವಹಸಿರುವ ಕನಿಷ್ಠ 5 ವರ್ಷಗಳ ಅನುಭವ<br>3). ಕಂಪ್ಯೂಟರ್ ನಲ್ಲಿ ಟೈಪಿಂಗ್ ಮಾಡುವ ವೃತ್ತಿಪರತೆ<br>4). ಎಂಸ್ ವರ್ಡ್, ಎಕ್ಸೆಲ್, ಸ್ಪ್ರೆಡ್ ಶೀಟ್ ಮುಂತಾದ ಕಂಪ್ಯೂಟರ್ ಪ್ಯಾಕೇಜ್ ಗಳಲ್ಲಿ ಕೆಲಸಮಾಡಿರುವ ಅನುಭವ | 1). ಈ ಸಾಮರ್ಥ್ಯದಲ್ಲಿ ಕನಿಷ್ಠ 3-5 ವರ್ಷಗಳ ಅನುಭವವಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು |
| 4 | ದ್ವಿತೀಯ ದರ್ಜೆ ಗುಮಾಸ್ತ (ಲೋವರ್ ಡಿವಿಜನ್ ಕ್ಲರ್ಕ್) | 02 | ರೂ. 21, 200 | 40 ವರ್ಷಗಳು ಮೀರಿರಬಾರದು. | 1). ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿ.<br>2). ಅಕೌಂಟ್ಸ್/ಸಿಬ್ಬಂದಿ ವಿಭಾಗಗಳಲ್ಲಿ ಕ್ಲರ್ಕ್ ಅಥವಾ ಸಹಾಯಕರಾಗಿ ಕಾರ್ಯ ನಿರ್ವಹಸಿರುವ ಕನಿಷ್ಠ 2 ವರ್ಷಗಳ ಅನುಭವ<br>3). ಕಂಪ್ಯೂಟರ್ ನಲ್ಲಿ ಟೈಪಿಂಗ್ ಮಾಡುವ ವೃತ್ತಿಪರತೆ<br>4). ಎಂಸ್ ವರ್ಡ್, ಎಕ್ಸೆಲ್, ಸ್ಪ್ರೆಡ್ ಶೀಟ್ ಮುಂತಾದ ಕಂಪ್ಯೂಟರ್ ಪ್ಯಾಕೇಜ್ ಗಳಲ್ಲಿ ಕೆಲಸಮಾಡಿರುವ ಅನುಭವ | ಈ ಸಾಮರ್ಥ್ಯದಲ್ಲಿ ಕನಿಷ್ಠ 1-2 ವರ್ಷಗಳ ಅನುಭವವಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು |

***